# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 395
ಸದಸ್ಯರ ಹೆಸರು : ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 12-12-2018
ಉತ್ತರಿಸುವ ಸಚಿವರು : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

*****

| ಕ್ರ.ಸಂ. | ಪ್ರಶ್ನೆ | ಉತ್ತರ |
| --- | --- | --- |
| ಅ) | ಡಾ: ಕೆ.ಕಸ್ತೂರಿ ರಂಗನ್ ರವರು ಪಶ್ಚಿಮಘಟ್ಟ ಪ್ರದೇಶದ ಸಂರಕ್ಷಣೆಗಾಗಿ ನೀಡಿರುವ ವರದಿಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರವು ದಿನಾಂಕ:03.10.2018 ರಂದು ನಾಲ್ಕನೇ ಬಾರಿಗೆ ಕರಡು ಅಧಿಸೂಚನೆಯನ್ನು ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, | ಹೌದು. ಡಾ: ಕೆ.ಕಸ್ತೂರಿ ರಂಗನ್ ರವರು ಪಶ್ಚಿಮಘಟ್ಟ ಪ್ರದೇಶದ ಸಂರಕ್ಷಣೆಗಾಗಿ ನೀಡಿರುವ ವರದಿಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ದಿನಾಂಕ 03.10.2018 ರಂದು ನಾಲ್ಕನೇ ಬಾರಿಗೆ ಕರಡು ಅಧಿಸೂಚನೆಯನ್ನು ಹೊರಡಿಸಿರುತ್ತದೆ ಮತ್ತು ಈ ಅಧಿಸೂಚನೆಗೆ ಆಕ್ಷೇಪಣೆ/ಸಹಮತಿಯನ್ನು ಸಲ್ಲಿಸಲು 60 ದಿನಗಳ ಕಾಲಾವಕಾಶವನ್ನು ನೀಡಲಾಗಿದೆ.<br>ಪರಿಸರ ಸಂರಕ್ಷಣೆ ನಿಯಮಗಳು, 1986ರ ನಿಯಮ 5(3)(ಡಿ) ರ ಪ್ರಕಾರ ಕಾನೂನುಬದ್ಧವಾಗಿ ಪರಿಸರ ಸಂರಕ್ಷಣೆ ನಿಯಮ 1986ರ ನಿಯಮ 5(3)(ಡಿ) ರ ಪ್ರಕಾರ ಕಾನೂನುಬದ್ಧ 120 ದಿನಗಳ ಕಾಲಾವಕಾಶದಲ್ಲಿ ಆಕ್ಷೇಪಣೆ /ಸಹಮತಿ ಇತ್ಯಾದಿಯನ್ನು ಸಲ್ಲಿಸಬಹುದಾಗಿರುತ್ತದೆ. ಅಧಿಸೂಚನೆಯನ್ನು ಪರಿಶೀಲಿಸಿ ಅಭಿಪ್ರಾಯವನ್ನು ತಿಳಿಸಲು ಕಾಲಾವಕಾಶದ ಅವಶ್ಯಕತೆ ಇರುವುದರಿಂದ, ಕಾಲಾವಕಾಶವನ್ನು ವಿಸ್ತರಿಸುವಂತೆ ಕೋರಿ ದಿನಾಂಕ 28.11.2018 ರಂದು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆಯಲಾಗಿದೆ.<br>ಈ ವಿಷಯವನ್ನು ಪರಿಶೀಲಿಸಿ ಅಗತ್ಯ ನಿರ್ಣಯಗಳನ್ನು ಕೈಗೊಳ್ಳಲು ಸಚಿವ ಸಂಪುಟದ ಉಪಸಮಿತಿಯನ್ನು ರಚಿಸಲಾಗಿದೆ. ವಿಷಯವು ಸಚಿವಸಂಪುಟದ ಉಪಸಮಿತಿಯ ಪರಿಶೀಲನೆಯಲ್ಲಿದ್ದು ಶೀಘ್ರವೇ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಲಾಗುವುದು. |
| ಆ) | ಬಂದಿದ್ದಲ್ಲಿ, ಈ ಅಧಿಸೂಚನೆಗೆ ಆಕ್ಷೇಪಣೆ/ಸಹಮತಿಯನ್ನು ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ನಿಗದಿಪಡಿಸಿರುವ ಕಾಲಮಿತಿ ಏನು; | |
| ಇ) | ಈ ಅಧಿಸೂಚನೆಗೆ ರಾಜ್ಯ ಸರ್ಕಾರವು ಆಕ್ಷೇಪಣೆಗೆ/ಸಹಮತಿ ನೀಡಿದೆಯೇ (ವಿವರ ನೀಡುವುದು) | |
| ಈ) | ಇಲ್ಲವಾದಲ್ಲಿ, ರಾಜ್ಯ ಸರ್ಕಾರವು ತನ್ನ ಅಭಿಪ್ರಾಯವನ್ನು ಯಾವಾಗ ತಿಳಿಸುವುದು ಹಾಗೂ ರಾಜ್ಯ ಸರ್ಕಾರದ ಅಭಿಪ್ರಾಯವೇನು? (ವಿವರ ನೀಡುವುದು) | |

ಸಂಖ್ಯೆ: ಎಫ್‌ಇಇ 82 ಎಫ್‌ಎಲ್‌ಎಲ್ 2018

(ಆರ್. ಶಂಕರ್)
ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು